ಕೂಡ ಹೌದು. ಒಬ್ಬ ಕವಿಯ ಪ್ರಸಿದ್ಧಿ ಇರುವುದು ಅವನ ಪ್ರಭಾವದಲ್ಲೆ ಹೊರತು ಖ್ಯಾತಿಯಲ್ಲಿ ಅಲ್ಲ. ಅಮೆರಿಕ ಅಧ್ಯಕ್ಷನಾದವನಿಗೆ ತನ್ನಿಂದ ತಾನೇ ಖ್ಯಾತಿ ಸಿಗುತ್ತೆ. ಆದ್ರೆ ಅವನ ಪ್ರಭಾವ ಎಂಥದ್ದು ಅನ್ನೋದು ಮುಖ್ಯ. ಕವಿಯಾದವನು ತನ್ನ ಜನಮಾನಸದಲ್ಲಿ, ವಿಶ್ವಮಾನಸದಲ್ಲಿ ಈ ಕಲೆಕ್ಟಿವ್ ಅನ್ಕಾನ್ಶಿಯಸ್‌ನಲ್ಲಿ ಉಂಟುಮಾಡುವ ಗುರುತುಗಳೇ ಮುಖ್ಯವಾದವುಗಳು. ಅವನ ಪ್ರಭಾವದ ತರಂಗಗಳ ವ್ಯಾಪ್ತಿ ಗಮನಿಸಬೇಕು. ಕಾಳಿದಾಸ, ಸೋಫೊಕ್ಲಿಸ್, ಶೇಕ್ಸ್‌ಪಿಯರ್ ಇಂಥ ಪ್ರಭಾವಶಾಲಿ ಬರಹಗಾರರು. ಇವತ್ತಿನ ಅನೇಕ ಬರಹಗಾರರು ವರ್ತಮಾನದಲ್ಲಿರ್ತಾರೆ ಆದರೆ ಪ್ರಭಾವ ಇರುವುದೇ ಇಲ್ಲ. ಪ್ರಭಾವ ಅಂದ್ರೆ ಗುಂಪು ಕಟ್ಕೊಂಡು ತಿರುಗಾಡೋದಲ್ಲ. ವರ್ತಮಾನದ ಅನೇಕ ಬರಹಗಾರರಿಗಿಂತ ನಮಗೆ ಕಾಳಿದಾಸ, ಸೋಫೊಕ್ಲಿಸ್, ಭಾಸ, ಭವಭೂತಿ, ಇಳಂಗೊ ಅಡಿಗಳ್ ಮುಂತಾದವರು ಯಾಕೆ ಇವತ್ತಿಗೂ ಪ್ರಸ್ತುತರಾಗಿದ್ದಾರೆ? ಅನ್ನೋದನ್ನ ನಾವೆಲ್ಲ ಗಂಭೀರವಾಗಿ ಕೇಳ್ಕೋಬೇಕು.

◆ **ನೀವು ಅಡಿಗರ ಬಗ್ಗೆ ಹೇಳಿದ್ರಿ. ಕನ್ನಡದ ಇನ್ನಿಬ್ಬರು ಮುಖ್ಯ ಕವಿಗಳ ಕಾವ್ಯದ ಬಗ್ಗೆ ನಿಮ್ಮ ಸ್ಪಂದನೆ ಕೇಳಬೇಕಾಗಿದೆ. ಒಬ್ರು ಬೇಂದ್ರೆ, ಇನ್ನೊಬ್ರು ಕುವೆಂಪು. ಇವರ ಕಾವ್ಯದ ಓದು ನಿಮ್ಮಲ್ಲಿ ಉಂಟುಮಾಡಿದ ಅನುಭವ ಯಾವ ಬಗೆಯದು?**

ಕುವೆಂಪು ಅವರಲ್ಲಿ ಬಹಳ ಗಾಢವಾದ ದರ್ಶನವಿದೆ. ಆದ್ರೆ ಅದಕ್ಕೆ ತಕ್ಕನಾದ ಭಾಷೆ ಅವರಲ್ಲಿ ಇಲ್ಲ. ಅವರ ಭಾಷೆ ಜನಕ್ಕೆ ಅರ್ಥವಾಗ್ಲಿಲ್ಲ. ಬೇಂದ್ರೆಯವರಲ್ಲಿ ಆ ಭಾಷಿಕ ಇಂದ್ರಜಾಲ, ಮಾಯಾಜಾಲವಿದೆ. ಆದ್ರೆ ಗಾಢವಾದ ಸಮಗ್ರವಾದ ದರ್ಶನ ಅವರಲ್ಲಿ ಇಲ್ಲ ಅನಿಸುತ್ತೆ. ಬೇಂದ್ರೆಯವರ ಭಾಷಿಕ ಚಮತ್ಕೃತಿ ಮತ್ತು ಕುವೆಂಪು ಅವರ ದಾರ್ಶನಿಕ ನೆಲೆಗಳು ಇವೆರಡರ ಸಂಬಂಧ ಶಕ್ತವಾಗಿ ಕಾಣಿಸಿಕೊಂಡದ್ದು ಗೋಪಾಲಕೃಷ್ಣ ಅಡಿಗರಲ್ಲಿ. ಅಡಿಗರಲ್ಲಿ ಕಾಣದ ಒಂದು ಮೆಲುದನಿಯ ಅನುಭವಲೋಕ ಏನಿದೆ ಅದು ಕೆ.ಎಸ್. ನರಸಿಂಹಸ್ವಾಮಿ ಅವರಲ್ಲಿತ್ತು. ಕೆ.ಎಸ್.ಎನ್. ಕನ್ನಡದ ಇನ್ನೊಬ್ಬ ಶ್ರೇಷ್ಠ ಕವಿ. ಕನ್ನಡದಲ್ಲಿ ಕೊನೆವರೆಗೂ ಹೊಸ ಹೊಸ ಗಡಿಗಳನ್ನು ದಾಟ್ತಾ ಹೋದ ಇಬ್ಬರು ಕವಿಗಳೆಂದರೆ ಅಡಿಗರು ಮತ್ತು ಕೆ.ಎಸ್.ಎನ್. ಎಲ್ಲ ಕವಿಗಳು ಒಂದು ಹಂತದಲ್ಲಿ ನಿಂತುಬಿಟ್ರು. ಕುವೆಂಪು ಮತ್ತು ಬೇಂದ್ರೆ ಕೂಡ. ನನಗೆ ನೆನಪಾಗ್ತಾ ಇರೋ ಇನ್ನೊಬ್ಬ ಸತ್ವಪೂರ್ಣ ಕವಿ ಅಂದ್ರೆ ಮಧುರಚೆನ್ನರು. ಮಧುರಚೆನ್ನರು ಬರೆದದ್ದು ಕಡಿಮೆ. ಮುಖ್ಯವಾಗಿ 'ದೇವತಾ ಪ್ರಥಿವಿ' ಮತ್ತು 'ನನ್ನ ನಲ್ಲ'. ಆದ್ರೆ ಅವರ ಇವೆರಡು ಕವಿತೆಗಳನ್ನು ಒಂದು ತಕ್ಕಡಿಯಲ್ಲಿ ಹಾಗೂ ಬೇಂದ್ರೆಯವರ ಕಾವ್ಯವನ್ನು ಮತ್ತೊಂದು ತಕ್ಕಡಿಯಲ್ಲಿಟ್ರೆ ಮಧುರಚೆನ್ನರ ಕಾವ್ಯದ ತೂಕವೇ ಹೆಚ್ಚು. ಅಡಿಗರು ಹೇಳ್ತಾ ಇದ್ರು, 'ನೋಡಯ್ಯಾ ಈ ಬೇಂದ್ರೆಯವರು ನೂರು ಕವಿತೆಗಳಲ್ಲಿ ಮಾಡಿದ್ದನ್ನು ಮಧುರಚೆನ್ನರು ಎರಡೇ ಕವಿತೆಯಲ್ಲಿ ಮಾಡ್ಬಿಟ್ಟಿದ್ದಾರೆ' ಅಂತ. ಇವರು ನಿಜವಾದ ಮಹಾಕವಿ ಅಂತ ಹೇಳಿದ್ರು. ನಾನು ಅಡಿಗರಷ್ಟು ಅತಿಗೆ ಹೋಗಿ ಹೇಳೋದಿಲ್ಲವಾದ್ರೂ ಮಧುರಚೆನ್ನರು ನನಗೆ ತುಂಬಾ ಮುಖ್ಯ ಕವಿಯಾಗಿ ತೋರಿದ್ದಾರೆ. ಗಾತ್ರ ಮುಖ್ಯವಲ್ಲ ಗುಣ ಮುಖ್ಯ. ವಚನಕಾರರದೆಷ್ಟಿದೆ ಬರಹ? ಬಸವಣ್ಣನದು? ಅಕ್ಕನದು? ಅಲ್ಲಮನದು? ಎಲ್ಲ ಸೇರಿದರೆ ಒಬ್ಬೊಬ್ಬರದು ಇನ್ನೂರು ಪುಟವೂ ದಾಟೋದಿಲ್ಲ. ಆದ್ರೆ ಇವರ ಕಾವ್ಯ ಯಾವ ಮಹಾಕಾವ್ಯಕ್ಕಿಂತ ಕಮ್ಮಿ ಇದೆ. ನನಗೆ ಒಂದೊಂದು ಸಲ ತುಂಬಾ ಮುಜುಗರ ಆಗುತ್ತೆ. ತುಂಬಾ ಬರ್ದುಬಿಟ್ಟೆನೇನೊ ಅಂತ. ನನ್ನ ಸಮಗ್ರ ಕಾವ್ಯವೇ ಎಂಟುನೂರು ಪುಟದ ಸಮೀಪವಿದೆ. ಇಷ್ಟು ಯಾಕೆ ಬರೆದೆನೊ ಅಂತ ಅನ್ನಿಸುತ್ತೆ ಒಂದೊಂದು ಸಲ. ಒಂದು ಸಂಕಲನದಿಂದ ಇನ್ನೊಂದು ಸಂಕಲನಕ್ಕೆ ಗುಣಾತ್ಮಕ ವ್ಯತ್ಯಾಸ ಕಾಣದೇ ಇದ್ರೆ ಯಾಕೆ ಬರೀಬೇಕು?